ರಿಜಿಸ್ಟ್ರನ ಇನಿಷಿ ನಂಬರ್.	ಕಕ್ಷಿಗಾರ ಹೆಸರು.		ತಂಸೊಕೆನ ತಾರೀಖು.	ರಿಜಿಸ್ಟ್ರಿಗೆ ಬಾಡದಾಸಿ ಇದ ತಾರೀಖು.	ರಿಜಿಸ್ಟ್ರಿದ ತಾರೀಖು.	ಸ್ವಭಾವ.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.				
1885—86ನೇ ಇಸವಿ 82ನೇ ನಂಬರು.	ಹೆರೇಸಂದ್ರದಲ್ಲಿ ಇರುವ ಜಂಗಮನಕೊಟ್ಟಿ ಸಿಂಕಪ್ಪರಾಜು ಮಗ ಸುಬ್ಬರಾಜು.	ಹೆರೇಸಂದ್ರದಲ್ಲಿ ಇರುವ ಪಿಪ್ಪುನಾಯಕನ ಕೊಡಗನಾರ ನಾಯಕ್ಕ.	1885ನೇ ಇಸವಿ ಜೂಲೈ ತಾರೀಖು 24.	1885ನೇ ಇಸವಿ ಜೂಲೈ ತಾರೀಖು 26.	1885ನೇ ಇಸವಿ ಜೂಲೈ ತಾರೀಖು 26.	ಹೆರೇಸಂದ್ರ ಗ್ರಾಮದ ಬಳೀ ಪೂರ್ವ ಕಡೆ ಗೋವಿಂದಪ್ಪನ ತೋಪಿನ ಹತ್ತಿರ ಇರುವ ಬರ ಮುಕೊಟ್ಟಿನ ನೈಂಜ ಹದಿನಾಲ್ಕರ ಸರ್ವೇ 73ನೇ ನಂಬರು ತರೀ ಜಮೀನ್ ೧-೩೫ ಗುಂಟೆ ಜಮೀನನ್ನು 20 ರೂಪಾಯಿಗಳಿಗೆ ಕ್ರಯಕ್ಕೆ ಕೊಟ್ಟು ಇರುವದಾಗಿ.

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.

ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 87.

ಮೃತಪಟ್ಟ ಶೇಕದಾರ್ ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೃಷ್ಣಪ್ಪನು, ಮೃತಪಟ್ಟ ಸದರೀ ಸುಬ್ಬರಾಯರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ ತಾಲ್ಲೂಕು ಮಣಿಕೆನಹಳ್ಳಿ ಸ್ಥಳದ ಕೃಷ್ಣಪ್ಪನು ಸಾಗರ ತಾಲ್ಲೂಕು ಕಲ್ಲಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸುಬ್ಬರಾಯನ ಜಿಂದಗೀ ಬಗ್ಯಾಗಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಇರುವ ರೂಪಾಯಿ 575—5—10 ತೆಗದು ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕೃಷ್ಣಪ್ಪನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಸೆಪ್ಟೆಂಬರ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ ಜಡ್ಜ.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ರ 1887ನೇ ಇಸವಿ ಅಕ್ಟೋಬರ್ ಗುರ್ಸೇ ಲಾಗಾಯಿತು 1888ನೇ ಇಸವಿ ಜೂನ್ 15ನೇ ತಾರೀಖುವರಿಗೆ ಸುಮಾರು 200 ಯಕರೆ ಜಂಗಲೀಯನ್ನು ಕ್ಲಿಯರ್‌ಮಾಡಿಸಿ 18, ಅಂಗುಲ ಲಾಂಬಿ 18, ಅಂಗುಲ ರುಂದೀ 18, ಅಂಗುಲ ಮಟ್ಟುವಾದ (200000) ಯರಡು ಲಕ್ಷ ಗುಣಿಗಳನ್ನು ತೆಗಿಯುತಕ್ಕ ಬಗ್ಯೆ ಈ ತಾರೀಖು ಲಾಗಾಯಿತು (1887ನೇ ಇಸವಿ) ಅಕ್ಟೋಬರ್ 15ನೇ ತಾರೀಖುವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತದೆ.

ಕ್ಲಿಯರ್‌ಮಾಡತಕ್ಕ ಸ್ಥಳ.	ಯಕರೆ.	ಗುಣಿಗಳ ಸಂಖೆ.
ಲಕ್ಕುವಳ್ಳೀ ತರೀಕೆರೇ ತಾಲ್ಲೂಕು	50	50000
ಸಕ್ರೇಪೈಲ್ ಶಿವಮೊಗ್ಗಾ ತಾಲ್ಲೂಕು	50	50000
ಅನಿವೆನಕಟ್ಟೆ ಡಿಟೋ	25	25000
ಕಾಳೇನಹಳ್ಳೀ ಷಿಕಾರೀಪುರ	25	25000
ಶಿಡ್ಡಿಹಳ್ಳೀ ಸೊರಬದ ತಾಲ್ಲೂಕು	50	50000
	200	200000

2. ಟೆಂಡರುಗಳು ಕ್ಲಿಯರ್‌ಮಾಡಲಿಕ್ಕೂ ಗುಣೀ ತೆಗಿಸುವದಕ್ಕೂ ಬೇರೆಬೇರೆಯಾಗಿ ದರ ನಮೂದ್ ಮಾಡಬೇಕು. ಕ್ಲಿಯರ್ ಮಾಡಲಿಕ್ಕೆ ಯಾಗಲೀ ಯಾ ಗುಣಿಗಳನ್ನ ತೆಗಿಯಲಿಕ್ಕೆ ಆಗಲಿ ಅಥವಾ ಯರಡಕ್ಕೂ ವಟ್ಟಿಗೆ ಯಾಗಲಿ ಟೆಂಡರ್ ಕೊಡಬಹುದು.

3. ಕ್ಲಿಯರ್ ಮಾಡುವದರಲ್ಲಿ ಮರಗಳು ಸೊಸಿಗಳು, ಬಿದರು ಟೆಂಡ್ಲುಗಳು, ನೆಲದಿಂದ 2 ಅಡೀ ವಳಗೆ ಕಡಿಯತಕ್ಕದ್ದು, ನಾಟಾ ಮತ್ತು ಬೆಲಗಿಗೆ ಲಾಯಖಾದಂಥಾ ಮರ ಮತ್ತು ಸೊಸಿಗಳು, ಮತು ಉಪಯೋಗವಾದಂಥಾ ಬಿದರುಗಳು ರೆಂಬೆ ಮುಳ್ಳು ವಗೈರೆಗಳನ್ನು ಕಡದು ಅಲ್ಲೇ ಬಿಡತಕ್ಕದ್ದು. ರೆಂಬೆಗಳು ಮತ್ತು ಮುಳ್ಳುಗಳು ವಗೈರೇ ಕಚರಾ ರಾಶಿಗಳಾಗಿ ವಟ್ಟು ಸುಡತಕ್ಕದ್ದು, ಕ್ಲಿಯರ್‌ಮಾಡಿದ್ದ ಜಾಗಾವು 1888ನೇ ಇಸವಿ ಏಪ್ರೆಲ್ ತಾರೀಖು 30ರ ವಳಗಾಗಿ ಗುಣೀ ತೆಗಿಯಲಿಕ್ಕೆ ಸಿದ್ಧವಾಗಿರಬೇಕು. ಗುಣೀ ತೆಗಿಯುವ ಕೆಲಸವು ಜೂ೯ 30ನೇ ತಾರೀಖಿನ ವಳಗಾಗಿ ಮುಗಿಯತಕ್ಕದ್ದು.

4. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಮುಚ್ಚಳಿಕೇ ಷರ್ತುಗಳಿಗೆ ಅನುಸರಿಸಿ ನಡಿಯುವ ಹಾಗೆ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯಿತು 3 ದಿವಸದ ವಳಗಾಗಿ (100) ನೂರು ರೂಪಾಯಿ ಠೇವಣೀ ಇಡತಕ್ಕದ್ದು.

5. ಸ್ ೧೮೮೭ನೇ ಇಸವಿ ಡಿಸಂಬರ್ ಆಖೈರ್ ವಳಗಾಗಿ ಕ್ಲಿಯರ್‌ಮಾಡುವ ಕೆಲಸವೂ 1888ನೇ ಇಸವಿ ಮೇ ಆಖೈರುವಳಗಾಗಿ ಗುಣೀ ತೆಗಿಯುವ ಕೆಲಸವೂ ತಕ್ಕ ಅಭಿವೃದ್ಧೀಯಲ್ಲಿ ಇಲ್ಲದಿದ್ದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮಾಡಲಿಕ್ಕೆ ಅಸಿಸ್ಟೆಂಟ್ ಕ್ವಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ, ಮತ್ತು ಠೇವಣೀ ಯಿಟ್ಟ ಮೊಬಲಗು ಸರ್ಕಾರಕ್ಕೆ ಜೇರಿಸಲ್ಪಡತಕ್ಕದ್ದು.

6. ಈ ನೋಟಿಫಿಕೇರ್ಷನಲ್ಲಿ ನಮೂದ್ ಮಾಡಿದ ತಾರೀಖು ವಳಗೆ ಕ್ಲಿಯರ್ ಮತ್ತು ಗುಣೀ ತೆಗಿಯುವ ಕೆಲಸವು ಸಂಪೂರ್ಣವಾಗಿ ಪೂರೈಸದಿದ್ದ ಪಕ್ಷಕ್ಕೆ ಕೆಲಸ ಮಾಡಿದ್ದ ಭಾಗಕ್ಕೆ ಕಂಟ್ರಾಕ್ಟುದಾರನಿಗೆ ಸರಕಾರದಿಂದ ಏನೇನೂ ಸಲ್ಲತಕ್ಕದ್ದಿಲ್ಲವು. ಮತ್ತು ಠೇವಣೀ ಇಟ್ಟ ಮೊಬಲಗಿನ ಹಕ್ಕು ತಪ್ಪಿಹೋಗುವದು.

7. ಟೆಂಡರ್‌ಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕ್ವಸರ್‌ವೇಟರವರ ಆಫೀಸಿಗೆ ಕಳುಹಿಸಬೇಕು. ಯಾವ ಟೆಂಡರನ್ನಾಗಲಿ ಕಾರಣವನ್ನ ತೋರಿಸದೇ ಮಂಜೂರ್ ಮಾಡದೇ ಇರಲಿಕ್ಕೆ ಅಸಿಸ್ಟೆಂಟ್ ಕ್ವಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

8. ಇದರ ಸಿವಾಯಿ ಯಿನ್ನೇನಾದರೂ ಸಂಗತೀ ತಿಳಕೊಳ್ಳತಕ್ಕದ್ದಿದ್ದರೆ ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕ್ವಸರ್‌ವೇಟರ್ ಸಾಹೇಬರವರಲ್ಲಿ ತಿಳಕೊಳ್ಳಬಹುದು.

ಯಿ. ಪಿ. ಲಾರಿ,
ಅಸಿಸ್ಟೆಂಟ್ ಕ್ವಸರ್‌ವೇಟರ್ ಆಫ್ ಫಾರೆಸ್ಟ್ಸ್.

ಕೊಡಗು.

ನೋ ಟೀ ಸ್.

ತಾರೀಖು 5ನೇ ಸೆಪ್ಟಂಬರ್ 1887.

ಇಂಜನಿಯರು ಇಲಾಖಾ ಬಾಬತು ತಾಂಬ್ರದ ತಗಡುಗಳು ಮತ್ತು ಮೊಳೆಗಳು ಸುಮಾರು 200 ಪೌಂಡಗಳು ಮಡಿಕೇರೀ ತಾಲ್ಲೂಕು ಕಛೇರೀಮುಂದೆ ಸೆಪ್ಟಂಬರ್ ತಾರೀಖು 7ನೇ ಬುಕ್ರವಾರದ ಲಾಗಾಯತು ಪ್ರತಿ ಬುಕ್ರವಾರದಲ್ಲೂ ಇನ್ನೊಂದು ನೋಟೀಸ್ ಕೊಡುವ ಪರಿಯಂತರ ಹರಾಜ್ ಹಾಕಲ್ಪಡುತವೆ. (ನಗದು ಹಣ.)

ಇ. ಐ. ಪೆರ್ರಾಮ್,
ಎಗ್ಜಿಕ್ಯೂಟಿವ್ ಇಂಜನಿಯರ್.